ದಿನಾಂಕ 19/01/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಎಲ್.ಎಸ್.ಸಿ. ಪ್ರತಿವಾದಿ ಪರ ವಕೀಲರಿಂದ**

ನಮ್ಮ ಜಮೀನಿನ ಉತ್ತರ ದಿಕ್ಕಿಗೆ ಪ್ರತಿವಾದಿ ಜಮೀನು ಬರುತ್ತದೆ. ನಮ್ಮ ಮತ್ತು ಪ್ರತಿವಾದಿ ಜಮೀನಿನ ಮಧ್ಯೆ ಬದು ಇರುತ್ತದೆ ಎಂದರೆ ಸರಿ. ಸದರಿ ಬದುವಿನನಿಂದ ನಮ್ಮ ಜಮೀನು 2 ಅಡಿ ಎತ್ತರದಲ್ಲಿರುತ್ತದೆ ಎಂದರೆ ಸರಿ. ನಮ್ಮ ಜಮೀನಿನಲ್ಲಿ ಅಡಿಕೆ ಗಿಡ ಮತ್ತು ತೆಂಗು ಬೆಳೆಸಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತೇಗ ಬೆಳೆದಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿ ಅವರ ಜಮೀನಿನಲ್ಲಿ ಅಡಿಕೆ , ತೆಂಗು ಮತ್ತು ಸ್ವಿಲ್ವರ್ ಬೆಳೆಸಿರುತ್ತಾರೆ ಎಂದರೆ ಸರಿ. ನಮ್ಮ ಜಮೀನಿನಲ್ಲಿ ಕೊಳವೆ ಬಾವಿ ಕೊರಸಿ 20 ವರ್ಷ ಆಗಿರುತ್ತದೆ. ಸದರಿ ಬಾವಿಗೆ ಐಪಿ ಸೆಟ್ ಅಳವಡಿಸಿರುತ್ತೇವೆ ಎಂದರೆ ಸರಿ. ಐ.ಪಿ ಸೆಟ್ ಅಳವಡಿಸಲು ಪರವಾನಿಗೆ ಪಡೆದಿರುತ್ತೇವೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ.

2. ದಿ.25/06/1976 ರಂದು ಪ್ರತಿವಾದಿ ತಮ್ಮ ಜಮೀನನ್ನು ಕೊಂಡುಕೊಂಡಿರುತ್ತಾರೆ ಎಂದರೆ ಸರಿ. ದಿನ್ನೆ ಜಮೀನನ್ನು ನಾವು ಮತ್ತು ಪ್ರತಿವಾದಿಗಳು ನೀರಾವರಿಯಾಗಿ ಬದಲಾವಣೆ ಮಾಡಿರುತ್ತೇವೆ ಎಂದರೆ ಸರಿ. ಅಡಿಕೆ, ತೆಂಗು ಬೆಳೆಯುವ ಬಗ್ಗೆ ಪಹಣಿಯಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಎತ್ತರದ ಜಮೀನಿನಲ್ಲಿ ಅಡಿಕೆ ಮತ್ತು ತೆಂಗು ಇರುತ್ತದೆ ಎಂದರೆ ಸರಿ. ತಗ್ಗಿನ ಜಮೀನಿನಲ್ಲಿ ಪ್ರತಿವಾದಿಯ ತೆಂಗು ಮತ್ತು ಅಡಿಕೆ ಇದೆ ಎಂದರೆ ಸರಿ. ನಮ್ಮ ಜಮೀನಿಗೆ ಮಣ್ಣು ಹೊಡೆಯಲು ಪ್ರತಿವಾದಿ ಜಮೀನಿನಲ್ಲಿ ಅತಿಕ್ರಮ ಮಾಡಲು ಹೋದಾಗ ಪ್ರತಿವಾದಿ ನಮ್ಮ ವಿರುದ್ಧ ಮಧುಗಿರಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿ ನಾವು ಕೊಟ್ಟಿದ್ದೇವೆ ಎಂದು ಉತ್ತರಿಸಿರುತ್ತಾರೆ. ನಾವು ನಮ್ಮ ಜಮೀನಿನಲ್ಲಿ ಅಳತೆ ಮಾಡಿಸಿದ ದಾಖಲೆಯನ್ನು ಹಾಜರುಪಡಿಸಿರುತ್ತೇವೆ.

3. ನಾನು ನಮ್ಮ ಜಮೀನಿನಲ್ಲಿ ತೆಂಗು ಮತ್ತು ಅಡಿಕೆ ಮಾತ್ರ ಬೆಳೆದಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತೇಗದ ಗಿಡ ಇರುತ್ತವೆ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿ ತನ್ನ ಜಮೀನಿನ ಸುತ್ತಲೂ ತೆಂಗು , ಬಾಳೆ , ಸಿಲ್ವರ್ ಇಟ್ಟಿರುತ್ತಾರೆ ಎಂದರೆ ಸಾಕ್ಷಿ ಅವರ ಜಮೀನಲ್ಲಿ ಅವರು ಇಟ್ಟಿರುತ್ತಾರೆ ನಮ್ಮ ಜಮೀನಿನಲ್ಲಿ ನಾನು ಇಟ್ಟಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ಮಾತ್ರ ನಾವು ತೇಗದ ಗಿಡಗಳನ್ನು ಇಟ್ಟಿರುತ್ತೇವೆ ಉತ್ತರ ದಿಕ್ಕಿಗೆ ತೇಗದ ಗಿಡಗಳನ್ನು ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿ ಜಮೀನಿನ ಮಧ್ಯೆ ಇರುವ ಬದು ಜಂಟಿಯಾಗಿರುತ್ತದೆ ಎಂದರೆ ಸರಿ. ಸದರಿ ಬುದುವಿನ ತಗ್ಗಿನಲ್ಲಿ ತೇಗದ ಗಿಡಗಳು ಇರುತ್ತವೆ ಎಂದರೆ ಸರಿ.

5. ನಮ್ಮ ಜಮೀನಿನಲ್ಲಿ ಯಾವುದೇ ತೇಗದ ಮರಗಳನ್ನು ಬೆಳೆಸಿರುವುದಿಲ್ಲ , ಬೆಳೆಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಮ್ಮ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ ಎಂದರೆ ಸರಿ. ಸದರಿ ದಾವೆ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ನಾನು ಯಾವುದೇ ತೇಗದ ಮರ ಬೆಳೆಯದಿದ್ದರೂ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಹೂಡಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ